ಕೈ ಹಿಡಿದು ಕರೆದೊಯ್ದೆ 'ಬಾ ಈ ಕಡೆ' ಎಂದು. ಆದರೆ ಮಾತೇ ಬರುತ್ತಿಲ್ಲ. ನನ್ನ ಬದುಕಿನ ಎಲ್ಲಾ ವಿವರಗಳನ್ನು ಎಳೆ ಎಳೆಯನ್ನು ಕೇಳಿ ತಿಳಿದುಕೊಳ್ಳುತ್ತಿದ್ದ ಅವನು ಯಾವತ್ತು ತನ್ನ ಬದುಕಿನ ರಹಸ್ಯಗಳನ್ನು ಬಿಟ್ಟುಕೊಟ್ಟಿರಲಿಲ್ಲ. ಸುಮ್ಮನೇ ಅಕ್ಕ, ಅಪ್ಪ, ಅಮ್ಮ, ಹಳ್ಳಿ ಅಂತ ಏನೋ ಹಾರಿಕೆಯ ಮಾತುಗಳನ್ನು ಆಡಿ ಸುಮ್ಮನಾಗುತ್ತಿದ್ದ. ಐದು ವರ್ಷಗಳಲ್ಲಿ ಒಂದು ದಿನವೂ ಊರಿಗೆ ಹೋಗಿರಲಿಲ್ಲ. ಅಂತಹವನು ಅಂದು ಅವಳನ್ನು ಬಿಟ್ಟು ಹೋಗಿದ್ದ. ಅವನ ಆಗಾಧ ಸಾಂತ್ವನದ ಮಾತುಗಳು ಪ್ರೀತಿಯ ಭೋರ್ಗರೆತ ನನ್ನ ಕರಗಿಸಿ ಬಿಟ್ಟದ್ದು ಸುಳ್ಳಲ್ಲ. ನಾನಂದುಕೊಂಡ ಸಂಗಾತಿ ಇವನೇ, ಇವನ ಬಿಟ್ಟು ಯಾರು ಅಲ್ಲ. ಆ ಮೋಹನ್, ದಿಲೀಪ್, ಅರವಿಂದ್ ಯಾರೂ ಅಲ್ಲ!



ಅವನು ಹೇಳಿದ, 'ನಾನು ಆ ಸಮಯದಲ್ಲಿ ಮಾತನಾಡುವ ಪರಿಸ್ಥಿತಿಯಲ್ಲಿರಲಿಲ್ಲ ಕಣೇ. ಅಕ್ಕ ಯಾರನ್ನೋ ಪ್ರೀತಿಸಿದ ಕಾರಣಕ್ಕಾಗಿ ಪತ್ರ ಬರೆದಿಟ್ಟು ನ್ಯೂಯಾರ್ಕಿಗೆ ಹಾರಿ ಹೋಗಿದ್ದಳು. ಅಪ್ಪ-ಅಮ್ಮ ಆಘಾತಕ್ಕೆ ಒಳಗಾಗಿ ಅಪ್ಪನಿಗೆ ಮೈನರ್ ಹಾರ್ಟ್‌ಅಟ್ಯಾಕ್ ಆಗಿತ್ತಂತೆ. ಅರ್ಜೆಂಟ್ ಮನೆಯಿಂದ ನಡುರಾತ್ರಿ ಕಾಲ್ ಬಂದಿತ್ತು. ನೀನು ಪಾರ್ಟಿಯಂತ ಆ ದಿನ ಹೊರಗೋಗಿದ್ದೆ. ನಾನು ಅಂದಿನ ಸ್ಥಿತಿಯಲ್ಲಿ ಅಪ್ಪ-ಅಮ್ಮನಿಗೆ ನನ್ನ ವಿಷಯ ಹೇಳುವ ಯೋಚನೆ ಬರಲಿಲ್ಲ. ಅಕ್ಕನನ್ನು ಮತ್ತು ನನ್ನನ್ನು ಮುದ್ದಾಗಿ ಸಾಕಿದ್ದರು. ಅವಳಿಷ್ಟದಂತೆ ಪೈಲೆಟ್ ವೃತ್ತಿಗೆ ತರಬೇತಿ ಕೊಡಿಸಿ, ಅವಳಿಷ್ಟದ ನೌಕರಿ ಮಾಡಲು ಬಿಟ್ಟಿದ್ದರು. ಈಗ ಅಕ್ಕ ಕಾಲ್ ಮಾಡಿ ಕ್ಷಮೆ ಕೇಳಿ ಅಪ್ಪ-ಅಮ್ಮನನ್ನು ನೋಡಲು ಬಂದಿದ್ದಳು. ಅವಳಿಗೊಂದು ಹೆಣ್ಣು ಮಗು ಆಗಿದೆ. ಹೆಸರು ಚಾರಿತ್ರ್ಯ ಅಂತ. ತುಂಬಾ ಮುದ್ದಾಗಿದ್ದಾಳೆ. ಮಗು ಎಲ್ಲರನ್ನು ಒಂದು ಮಾಡಿ ಬಿಟ್ಟಿತು. ಅಪ್ಪ-ಅಮ್ಮ ಖುಷಿಯಾಗಿದ್ದಾರೆ. 'ಅವಳು ಮಾಡಿದ್ದು ಆ ಕ್ಷಣಕ್ಕೆ ತಪ್ಪು ಮಗ, ಆದರೆ ಪ್ರೀತಿಸುವುದು ತಪ್ಪಲ್ಲ. ಹೇಳದೇ ಹೋಗುವುದು ತಪ್ಪು' ಎಂದು ಅಪ್ಪ ಮಾತನಾಡಿದರು. ಅಪ್ಪ ಕುವೆಂಪು, ಅನಂತಮೂರ್ತಿ, ಲಂಕೇಶ್, ತೇಜಸ್ವಿಯವರನ್ನು ತುಂಬಾ ಚೆನ್ನಾಗಿ ಓದಿಕೊಂಡಿದ್ದರು. ಹಾಗಾಗಿ ತುಂಬಾ ದಾರ್ಶನಿಕತೆ ಅಪ್ಪನ ವ್ಯಕ್ತಿತ್ವದಲ್ಲಿ. ನನಗೆ ನನ್ನ ವಿಷಯದ ಬಗ್ಗೆ ನಿರಾಳತೆ ಸಿಕ್ಕಿತು.

ಈ ನಡುವೆ ನಿನ್ನ ಹುಡುಕದ ಜಾಗವೇ ಇಲ್ಲ ಪ್ರಾರ್ಥನಾ! ದೆಹಲಿ ತುಂಬಾ ತಿರುಗಾಡಿದೆ. ಮೊಬೈಲ್ ನಂಬರ್ ಕೂಡಾ ಇಲ್ಲ. ಇಷ್ಟು ದಿನಗಳಲ್ಲಿ ನನ್ನ ನೆನಪು ನಿನಗೆ ಆಗಲಿಲ್ಲವೇ ಪ್ರಾರ್ಥನಾ? ನಾನು ನನ್ನ ಹುಡುಕಿ ಬರುತ್ತಾಳೆಂದು ಕಾದೆ. ಆದರೆ ಪ್ರಾರ್ಥನಾ ಬರಲಿಲ್ಲ.'

ಹೌದು. ತಪ್ಪು ಅವಳದ್ದು ಅಲ್ಲವೇ? ಅವಳ್ಯಾಕೆ ಮತ್ತೆ ಅವನಿಗೆ ಫೋನ್ ಮಾಡಲಿಲ್ಲ. ಹುಡುಕಿಕೊಂಡು ದೆಹಲಿಗೆ ಬರಲಿಲ್ಲ ಛೇ! ಈಗ ಮನಸ್ಸು ನಿರಾಳವಾಯ್ತು. ಆದರೆ ಅರವಿಂದ್, ದಿಲೀಪ್, ಮೋಹನ್ ಇವರು ಎಷ್ಟೇ ಪೀಡಿಸಿದರೂ ಎಷ್ಟೇ ಒಳ್ಳೆಯವರೇ ಆಗಿದ್ದರೂ, ಇವನ ಜಾಗವನ್ನು ಅವರೆಂದೂ ತುಂಬಲಿಲ್ಲ. ಹಾಗೇ ಕಾಣಿಸಲೂ ಇಲ್ಲ. ಈಗ ಈ ಮೂವರಲ್ಲಿ ಯಾರನ್ನಾದರೂ ಒಪ್ಪಿಕೊಳ್ಳುವ ಅಗತ್ಯತೆ ಅನಿವಾರ್ಯತೆ ಅವಳಿಗಿಲ್ಲ. ಯಾಕೋ ಹೊಟ್ಟೆ ತೊಳೆಸಿದಂತಾಗಿ ಬಾಯಿ ಹಿಡಿದು ಸಿಂಕಿನತ್ತ ಹೋಗುತ್ತಾಳೆ. 'ಹೇ ಪ್ರಾರ್ಥನಾ ಏನಾಯ್ತು? ಆರ್ ಯು ಒಕೆ' ಎಂದು ಕೇಳುವವನಿಗೆ ಹೇಳುವ ಉತ್ತರ ಈಗ ದೊರಕಿತು.

'ಪ್ರಾರ್ಥನಾ ನೀ ಇಲ್ಲದಿರುವಾಗ ನನ್ನ ಪ್ರಾಜೆಕ್ಟ್ ಪಾರ್ಟನರ್ ನಯನಾ ಜೊತೆ ಕ್ರಶ್ ಆಗಿತ್ತು. ಅದು ಒಂದು ಸುಂದರ ಸಮಯ ಅಷ್ಟೇ. ಆದರೆ ಅದು ಕ್ರಶ್ ಮಾತ್ರ ಮತ್ತೇನೂ ಅಲ್ಲ. ಪ್ರಾಜೆಕ್ಟ್ ಮುಗೀತು. ಅವಳು ಜರ್ಮನಿಗೆ ಹೋದಳು ನಿನ್ನಿಂದ ನಾನೇನೂ ಮುಚ್ಚಿಡಲು ಆಗುವುದಿಲ್ಲ, ಅದ್ಕೆ ಹೇಳ್ದೆ. ನನಗೆ ನೀನು, ನಿನಗೆ ನಾನು ಅಂತ ಇರಬೇಕಾದ್ರೆ ಅವಳನ್ನು ನಿನ್ನಷ್ಟು ಪ್ರೀತಿಸಲು ನನ್ನಿಂದ ಸಾಧ್ಯವಾಗಲೇ ಇಲ್ಲ. ಒಂದು ನಿಮಿಷ ಯಾಕೋ ಹೊಟ್ಟೆ ತೊಳೆಸಿದಂತಾಗುತ್ತಿದೆ' ಎಂದು ಸಿಂಕಿನೆಡೆಗೆ ಹೋದನು. ಐದು ವರ್ಷದ ಸ್ನಾಕನ್ನು ಇಬ್ಬರು ಕಕ್ಕಿ ಖಾಲಿ ಮಾಡಿಕೊಂಡು ಪರಸ್ಪರ ನೋಡುತ್ತಾ ನಿಂತರು. ●